ದಿನಾಂಕ: 05.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು: **5** ರಿಂದ **8** ನೇ ಪ್ರತಿವಾದಿಗಳ ಪರ ವಕೀಲರಿಂದ:

ವಿಭಾಗವಾದ ನಂತರ ನಮ್ಮ ಕುಟುಂಬಕ್ಕೆ ಸರ್ವೇ ನಂ.298 ಅದರ ವಿಸ್ತೀರ್ಣ 9 ಎಕರೆ 15 ಗುಂಟೆ, ಸರ್ವೇ ನಂ.325 ಅದರ ವಿಸ್ತೀರ್ಣ 4 ಎಕರೆ 36 ಗುಂಟೆ ಮತ್ತು ಸರ್ವೇ ನಂ.305 ಅದರ ವಿಸ್ತೀರ್ಣ 1 ಎಕರೆ 14 ಗುಂಟೆ ಜಮೀನುಗಳು ಬಂದಿರುತ್ತವೆ. ಈ ಆಸ್ತಿಗಳನ್ನೆಲ್ಲಾ ನಾನೇ ಉಳುಮೆ ಮಾಡುತ್ತಿದ್ದೇನೆ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಹತ್ತಿ, ಜೋಳ, ತಂಬಾಕು, ಹುಳ್ಳಿ, ಮತ್ತು ಶೇಂಗಾ ಬೆಳೆಯುತ್ತೇನೆ. ಅದರ ಉತ್ಪನ್ನವನ್ನು ನಾನೇ ಅನುಭವಿಸುತ್ತಿದ್ದೇನೆ ಎಂದರೆ ಸರಿ. ಸದರಿ ಆಸ್ತಿಗಳನ್ನು ನಾನು ಬೇರೆಯವರಿಗೆ ಮಾರಾಟ ಮಾಡಿಲ್ಲ. ಸರ್ವೇ ನಂ.330 ರಲ್ಲಿ ನನ್ನ ತಂದೆಯ ಪಾಲಿಗೆ 16 ಗುಂಟೆ ಜಮೀನು ಬಂದಿದೆ. ಸದರಿ ಜಮೀನು ಈಗ ನನ್ನ ಹೆಸರಿನಲ್ಲಿದೆ. ಅದು ನನ್ನ ತಂದೆಯ ಕಡೆಯಿಂದ ನನಗೆ ಬಂದಿರುತ್ತದೆ. ಅದರ ಚೆಕ್‌ಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಭೀಮಣ್ಣರವರ ಜಮೀನು, ಉತ್ತರಕ್ಕೆ ಈರಪ್ಪ ಸುತಗಟ್ಟಿರವರ ಜಮೀನು ಮತ್ತು ದಕ್ಷಿಣಕ್ಕೆ ಅಡಿವೆಪ್ಪ ಸುತಗಟ್ಟಿರವರ ಜಮೀನು ಇರುತ್ತದೆ. ಚಂದ್ರಪ್ಪರವರಿಗೆ ಸರ್ವೇ ನಂ.47/12 ಮತ್ತು 47/15 ರ ಆಸ್ತಿಗಳು ಅವರ ತಂದೆಯಿಂದ ಬಂತು, ಕಮಲವ್ವರವರಿಗೆ ಸದರಿ ಆಸ್ತಿಗಳು ಅವರ ಗಂಡನಿಂದ ಬಂದವು. ಕಮಲವ್ವರವರು ಸದರಿ ಆಸ್ತಿಗಳನ್ನು ಮಾರಾಟ ಮಾಡಿಲ್ಲ. ಸದರಿ ಜಮೀನುಗಳ ಚೆಕ್‌ಬಂದಿ ಹೇಳಲಾಗುವುದಿಲ್ಲ. ಸರ್ವೇ ನಂ.47/12 ಮತ್ತು 47/15 ರ ವಿಸ್ತೀರ್ಣ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ಅಪ್ಪರಾಯಪ್ಪ ಅಪ್ಪಣ್ಣ ಗಣಾಚಾರಿರವರ ಸ್ವಾಧೀನದಲ್ಲಿವೆ, ಅವುಗಳಲ್ಲಿ ನನಗೆ ಇನ್ನೂ ಪಾಲು ಕೊಟ್ಟಿಲ್ಲ. ಚಂದ್ರಪ್ಪ ಮತ್ತು ಕಮಲವ್ವ ವಿಭಾಗ ವಾದ ನಂತರ ಸದರಿ ಜಮೀನುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಈಗಾಗಲೇ ಸಾಕಷ್ಟು ಸಮಯಾವಕಾಶವನ್ನು ನೀಡಿರುವುದರಿಂದ ಅವರ ಕೋರಿಕೆಯನ್ನು ತಿರಸ್ಕರಿಸಿ ಪಾಟೀಸವಾಲನ್ನು ಮುಕ್ತಾಯಗೊಳಿಸಲಾಯಿತು .

<u>ಮರುವಿಚಾರಣೆ:</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ